ತೆಗೆದುಕೊಳ್ಳುತ್ತೇನೆ. ಜಿಲ್ಲಾಪರಿಷತ್ತಿನ ಯಾವ ಅಧಿಕಾರಿ ಆ ರೀತಿ ನಮಗೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಹಣ ಇಲ್ಲವೆಂದು ತಮ್ಮಲ್ಲಿ ಕೊರತೆ ಹೇಳಿಕೊಂಡಿದ್ದಾರೆ, ಆ ಅಧಿಕಾರಿ ಹೆಸರು ಹೇಳಿದರೆ ನಾನು ವಿಚಾರ ತಿಳಿದುಕೊಂಡು ಅವರ ಮೇಲೆ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು : ನಿಮ್ಮ ಇಲಾಖೆಯ ಅಧಿಕಾರಿಗಳೇ ಹೇಳುತ್ತಾರೆ. ಇನ್ನು ಯಾರು ಹೇಳುತ್ತಾರೆ?

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ಹುಬ್ಬಳ್ಳಿ ತಾಲ್ಲೂಕು ಕಲಘಟಗಿ ತಾಲೂಕು ಕೂಡಿ ನನ್ನ ಕ್ಷೇತ್ರ ಬರುತ್ತದೆ. ನಮಗೆ ಮಗ್ಗುಲಲ್ಲಿ ದವಾಖಾನೆಯಿಲ್ಲ.

ಉಪಾಧ್ಯಕ್ಷರು : ನಿಮ್ಮ ಭಾಷೆ ಕೂಡ ಮಂತ್ರಿಗಳಿಗೆ ಅರ್ಥವಾಗುವುದಿಲ್ಲ. ನೀವು ಕೇಳುವುದನ್ನು ಕೇಳುವುದಿಲ್ಲ. ಏನೋ ಕೇಳುತ್ತೀರಿ, ಅವರು ಉತ್ತರ ಹೇಳುವುದಿಲ್ಲ.

ಶ್ರೀ ಎಂ. ಮಹದೇವ್ : ಅವರಿಗೇನು ಕಷ್ಟವಿದೆ ಎನ್ನುವುದನ್ನು ನೇರವಾಗಿ ಹೇಳಿದರೆ ಸಹಾಯ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅವರು ನೇರವಾಗಿ ಹೇಳಿಬಿಡಲಿ ಇಂಥ ಕಷ್ಟ, ಸಮಸ್ಯೆ ನಮಗಿದೆ ಅದಕ್ಕೆ ಸರ್ಕಾರ ಏನು ಮಾಡಬೇಕು ಎಂಬುದನ್ನು ಹೇಳಿಬಿಡಲಿ.

ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ : ತಾವು ವಿಚಾರ ಮಾಡಬೇಕು ನಮ್ಮ ಕಡೆ ಐದು ಪಶು ವೈದ್ಯಕೀಯ ಆಸ್ಪತ್ರೆ ಇದ್ದರೂ ಕೂಡ ಒಬ್ಬ ವೈದ್ಯರೂ ಇಲ್ಲ. ಅಲ್ಲಿ ಬರೆ ಕಾಂಪೌಂಡರ್ ಇದ್ದಾರೆ. ಆ ಕಾಂಪೌಂಡರ್ ಕಟ್ಟಿಕೊಂಡು ನಾವೇನು ಮಾಡುವುದು? ಅಲ್ಲಿ ಔಷಧಗಳನ್ನು ಕೊಡುವವರು ಅವರೇ ಆಗಿದ್ದಾರೆ. ತಾವು ಇದರ ಬಗ್ಗೆ ಹೇಳಬೇಕು.

ಶ್ರೀ ಎಂ. ಮಹದೇವ್ : ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಡಾಕ್ಟರ್ ಇಲ್ಲದೇ ಇದ್ದರೆ ಪಕ್ಕದ ಆಸ್ಪತ್ರೆಯಲ್ಲಿರುವ ಡಾಕ್ಟರ್‌ಗೆ ನಿಮ್ಮ ಕಡೆಯಲ್ಲಿರುವ ಆಸ್ಪತ್ರೆಗೆ ಬಂದು ನೋಡಬೇಕೆಂದು ತಿಳಿಸುತ್ತೇನೆ. ಇನ್ನು ಎರಡನೆಯದಾಗಿ ಈಗೇನು 250 ಜನ ಡಾಕ್ಟರ್‌ಗಳನ್ನು ತುಂಬುತ್ತಿದ್ದೇವೆ ಆ ರೀತಿ ಹುದ್ದೆಗಳನ್ನು ಭರ್ತಿ ಮಾಡುವ ಸಂದರ್ಭದಲ್ಲಿ ತಾವೇನು ಈಗ ತಮ್ಮ ಕಳವಳವನ್ನು ವ್ಯಕ್ತ ಮಾಡಿದ್ದೀರಿ ಈ ಸದನದಲ್ಲಿ ಅದನ್ನು ಗಮದಲ್ಲಿಟ್ಟುಕೊಂಡು ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಹೊಸಪೇಟೆ ತಾಲ್ಲೂಕ ಜಂಬುನಾಥ ಗುಡ್ಡದ ಸುತ್ತಮುತ್ತ ಗಣಿಗಾರಿಕೆ ನಡೆಯುತ್ತಿರುವುದು

613 (5391) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕಿ ಜಂಬುನಾಥ ಗುಡ್ಡದ ಸುತ್ತಮುತ್ತ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಈ ಗಣಿಗಾರಿಕೆಗಳವರು ನಡೆಸುತ್ತಿರುವ ಸ್ಫೋಟಕಗಳಿಂದ ಈ ಗುಡ್ಡದ ಮೇಲಿರುವ ಜಂಬುನಾಥಸ್ವಾಮಿ ದೇವಸ್ಥಾನ ಹಾಗೂ ಈ ಗುಡ್ಡದ ಸುತ್ತಮುತ್ತಲಿರುವ ಮನೆಗಳು ಬಿರುಕು ಬಿಟ್ಟು ಹಾನಿಗೊಳಗಾಗಿರುವುದು ಮತ್ತು ಕುಸಿಯುವ ಹಂತಕ್ಕೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಬಂದಿದ್ದಲ್ಲಿ, ಈ ಪುರಾತನ ದೇವಾಲಯವನ್ನು ಉಳಿಸಿಕೊಳ್ಳಲು ಹಾಗೂ ಗುಡ್ಡದ ಸುತ್ತಮುತ್ತ ಹಾನಿಗೊಳಗಾದ ಮನೆಗಳವರಿಗೆ ಯಾವ ಪರಿಹಾರವನ್ನು ನೀಡಲಾಗಿದೆ;

ಈ) ಈ ದೇವಸ್ಥಾನದ ಸುತ್ತಮುತ್ತ ನಡೆಯುತ್ತಿರುವ ಗಣಿಗಾರಿಕೆಯನ್ನು ನಿಲ್ಲಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ; ಇಲ್ಲದಿದ್ದರೆ ಕಾರಣವೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ) ಬಂದಿದೆ.

ಆ) ಜಂಬುನಾಥಸ್ವಾಮಿ ದೇವಸ್ಥಾನದ ಸುತ್ತಮುತ್ತ 200 ಮೀಟರ್ ಒಳಗಡೆ ಯಾವುದೇ ಗಣಿಗಾರಿಕೆಗೆ ಅವಕಾಶ ನೀಡಲಾಗಿಲ್ಲ. ಈ ಪ್ರದೇಶದಲ್ಲಿ ಸ್ಫೋಟಕಗಳನ್ನು ಬಳಸುವುದನ್ನು ನಿಷೇಧಿಸಲಾಗಿದೆ. ದೇವಸ್ಥಾನದ ಸುತ್ತಲೂ ಇರುವ ರಕ್ಷಣಾ ಗೋಡೆಗಳನ್ನು ಇನ್ನೂ ಮೇಲಕ್ಕೆ ಹೆಚ್ಚಿಸಿ ದೇವಸ್ಥಾನದ ಪ್ರದೇಶಕ್ಕೆ ಯಾವುದೇ ಕಲ್ಲಿನ ಚೂರುಗಳು ಬರದಂತೆ ತಡೆಯಲಾಗುತ್ತಿದೆ. ದೇವಸ್ಥಾನದ ಸುತ್ತಲೂ ಒಳ್ಳೆಯ ಕಬ್ಬಿಣದ ಅದಿರು ಇದ್ದರೂ ಸಹ ಯಾವುದೇ ರೀತಿಯ ಗಣಿಗಾರಿಕೆ ನಡೆಸದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ದೇವಸ್ಥಾನಕ್ಕೆ ಅಗಾಗ್ಗೆ ಸ್ಥಳೀಯ ಅಧಿಕಾರಿಗಳು ಭೇಟಿ ನೀರಿ ಯಾವುದೇ ರೀತಿಯ ತೊಂದರೆಯಾಗದಂತೆ ಕ್ರಮ ತೆಗೆದುಕೊಂಡಿರುತ್ತಾರೆ. ದೇವಸ್ಥಾನದ ಸುತ್ತಲಿನ ಪ್ರದೇಶವನ್ನು ಸುರಕ್ಷಿತ ಪ್ರದೇಶವೆಂದು ಘೋಷಿಸಿದೆ. ಈ ಕ್ರಮದಿಂದ ದೇವಸ್ಥಾನಕ್ಕೆ ಹಾಗೂ ದೇವಸ್ಥಾನದ ಆವರಣದಲ್ಲಿ ಇರುವ ಅರ್ಚಕರ ಮನೆಗಳಿಗೆ ಯಾವುದೇ ತೊಂದರೆ ಆಗಿರುವುದಿಲ್ಲ.

ಇ) ದೇವಸ್ಥಾನದ ಸುತ್ತ 200 ಮೀಟರ್ ಒಳಗೆ ಯಾವುದೇ ಗಣಿಗಾರಿಕೆಗೆ ಅನುಮತಿ ನೀಡಿರುವುದಿಲ್ಲ. ಹಾಗೂ ದೇವಸ್ಥಾನವನ್ನು ಸಂರಕ್ಷಿಸಲು ದೇವಸ್ಥಾನದ ಸುತ್ತಮುತ್ತಲ ಪ್ರದೇಶವನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ, 65: ಎಂಎಂಎಂ, 96 ದಿನಾಂಕ: 07.12.1996ರ ಪ್ರಕಾರ ಸುರಕ್ಷಿತ ಪ್ರದೇಶವೆಂದು ಘೋಷಿಸಿದೆ. ದೇವಸ್ಥಾನದ ಸುತ್ತಲೂ ಇರುವ ರಕ್ಷಣಾ ಗೋಡೆಗಳನ್ನು ಇನ್ನೂ ಮೇಲಕ್ಕೆ ಹೆಚ್ಚಿಸಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಪ್ರಮುಖವಾಗಿ ನಾನು ಪ್ರಶ್ನೆ ಕೇಳಿರುವಂಥದ್ದು ಏನೆಂದರೆ ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕು ಜಂಬುನಾಥ ಗುಡ್ಡದ ಸುತ್ತಮುತ್ತ ಗಣಿಗಾರಿಕೆ ನಡೆಯುತ್ತಿರುವಂಥದ್ದರ ಬಗ್ಗೆ. ಇನ್ನು ಎರಡನೆಯದಾಗಿ ಆ ಭಾಗದಲ್ಲಿ ಇತಿಹಾಸ ಪ್ರಸಿದ್ಧವಾದ ಐತಿಹಾಸಿಕ ದೇವಸ್ಥಾನ ಒಂದಿದೆ. ಇದು ಜಂಬುನಾಥಸ್ವಾಮಿ ದೇವಸ್ಥಾನ. ಇದೊಂದು ಇತಿಹಾಸ ಪ್ರಸಿದ್ಧವಾದ ಒಂದು ದೇವಸ್ಥಾನ. ಇಲ್ಲಿಗೆ ಲಕ್ಷಾಂತರ ಭಕ್ತರು ಬರುತ್ತಾರೆ. ದೇವಸ್ಥಾನದ ಕಲೆ, ಶಿಲ್ಪಕಲೆಗಳು ಇಂದಿಗೂ ಕೂಡ ಬಹಳ ಪ್ರಸಿದ್ಧವಾಗಿರುವಂಥದ್ದಾಗಿದೆ. ಪಕ್ಕದಲ್ಲಿ ಹಂಪಿ ವಿಶ್ವಪರಂಪರೆಯ ಸಾಲಿನಲ್ಲಿದ್ದಂಥ ಹಂಪಿ. ಇದಕ್ಕೆ ಹೊಂದಿಕೊಂಡಂತೆ ಇದ್ದದ್ದು ಈ ಜಂಬುನಾಥಸ್ವಾಮಿ ದೇವಸ್ಥಾನ. ಇಲ್ಲಿ ಗಣಿಗಾರಿಕೆಯಿಂದ ಏನಾಗುತ್ತಿದೆಯೆಂದರೆ ಹಂಪಿಯ ಇತಿಹಾಸ ಪ್ರಖ್ಯಾತಿಗೂ ಧಕ್ಕೆಯಾಗುವುದರ ಜೊತೆಗೆ ಈ ಜಂಬುನಾಥಸ್ವಾಮಿ ದೇವಾಲಯಕ್ಕೂ ಕೂಡ ಅಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯಿಂದ ಬಹಳಷ್ಟು ದೇವಸ್ಥಾನ ಶಿಥಿಲವಾಗುವಂಥ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಬಹಳ ವರ್ಷಗಳಿಂದ ಅಲ್ಲಿಯ ಭಕ್ತರು ಒಂದು ಬೇಡಿಕೆಯನ್ನಿಟ್ಟಿದ್ದಾರೆ. ಅಲ್ಲಿ ಸುತ್ತಮುತ್ತಲೂ ಗಣಿಗಾರಿಕೆಯನ್ನು ನೀವು ಸಂಪೂರ್ಣವಾಗಿ ನಿಷೇಧ ಮಾಡಬೇಕು ಎನ್ನುವ ಬಗ್ಗೆ ಸಾಕಷ್ಟು ಮನವಿಗಳನ್ನು ಕೊಟ್ಟಿದ್ದಾರೆ ಮತ್ತು ಸಾಕಷ್ಟು ಹೋರಾಟಗಳು ನಡೆದಿವೆ. ಆದರೆ ಇಲ್ಲಿಯವರೆಗೂ ಗಣಿಗಾರಿಕೆ ನಿಂತಿಲ್ಲ. ಅಕ್ರಮವಾದ ಗಣಿಗಾರಿಕೆ ಇವೊತ್ತಿಗೂ ನಡೆಯುತ್ತಿದೆ. ನೀವು ಉತ್ತರದಲ್ಲಿ 200 ಮೀಟರ್ ಒಳಗಡೆ ಗಣಿಗಾರಿಕೆಯನ್ನು ಬ್ಯಾನ್ ಮಾಡಿದ್ದೇವೆಂದು ಹೇಳಿದ್ದೀರಿ.

ನಿವು ದಿನಾಂಕ 7.12.1996ರಲ್ಲಿ ಬ್ಯಾನ್ ಮಾಡಿದ್ದು. ಅಲ್ಲಿಂದ ಬ್ಯಾನ್ ಮಾಡಿದ ನಂತರವೂ ಇವೊತ್ತಿಗೂ ಗಣಿಗಾರಿಕೆ ನಡೆಯುತ್ತಿದೆ. ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದೆ. ನಾನು ಏಕೆ ಹೇಳುತ್ತಿದ್ದೇನೆಂದರೆ ಇತ್ತೀಚಿನ ಕೆಲವು ಫೋಟೋಗಳನ್ನು ಅಲ್ಲಿಯವರು ನನಗೆ ಕಳುಹಿಸಿ ಕೊಟ್ಟಿದ್ದಾರೆ. ನಿಮಗೆ ಬೇಕಾದರೆ ಆ ಫೋಟೋಗಳನ್ನು ಕಳುಹಿಸಿಕೊಡುತ್ತೇನೆ. ಇವೊತ್ತು ದೇವಸ್ಥಾನ ಶಿಥಿಲವಾಗುತ್ತಾ ಅದು ಪೂರ್ತಿಯಾಗಿ ಕುಸಿದು ಬೀಳುವಂಥ ಪರಿಸ್ಥಿತಿಗೆ ಬಂದಿದ್ದು ಸಾಕಷ್ಟು ಬಿರುಕುಗಳೂ ಕೂಡ ಆಗಿದ್ದು, ಆ ಫೋಟೋಗಳೆಲ್ಲಾ ನನ್ನ ಕಡೆ ಇದೆ. ಅವುಗಳನ್ನು ನಾನು ಕಳುಹಿಸುತ್ತಿದ್ದೇನೆ. ನೀವೇನೋ, ಅಥವಾ ಡಿ.ಸಿ. ಯವರೋ, ಅಥವಾ ಸಂಬಂಧಪಟ್ಟ ಅಧಿಕಾರಿಗಳು ಆದೇಶವನ್ನೇನೋ ಹೊರಡಿಸುತ್ತೀರಿ. ಆದರೆ ಅನುಷ್ಠಾನವಾಗುವುದಿಲ್ಲ. ಅಕ್ರಮ ಗಣಿಗಾರಿಕೆಗಳು ಮುಂದುವರಿಯುತ್ತವೆ. ಈ ದೇವಸ್ಥಾನವನ್ನು ಉಳಿಸುವ ಸಲುವಾಗಿ ನೀವು ಯಾವ ಕ್ರಮವನ್ನು ಕೈಗೊಳ್ಳುತ್ತೀರಿ ಹಾಗೂ ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸುವುದಕ್ಕೆ ಯಾವ ಕ್ರಮವನ್ನು ಕೈಗೊಳ್ಳುತ್ತೀರಿ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎ. ಮುನಿಯಪ್ಪ : ಮಾನ್ಯ ಉಪಾಧ್ಯಕ್ಷರೇ, ಸುಮಾರು ಮೂವತ್ತು, ನವಲತ್ತು ವರ್ಷಗಳಿಂದಲೂ ಇಲ್ಲಿ ಗಣಿಗಾರಿಕೆ ನಡೆದುಕೊಂಡು ಬಂದಿದೆ. ಮೊದಲನೆಯದಾಗಿ 1987ರಲ್ಲಿ ಇದರ ಬಗ್ಗೆ ದೂರು ಬಂದಾಗ ತಕ್ಷಣ ಆ ದೇವಾಲಯದ ಸುತ್ತಲಿನ ಆವರಣದಲ್ಲಿ ಆರ್.ಜಿ. ಪಟ್ಟಾಭಿರಾಮಯ್ಯ ಎನ್ನುವವರಿಗೆ ಏನು ಗಣಿಗಾರಿಕೆಗೆ ಅನುಮತಿಯನ್ನು ಕೊಡಲಾಗಿತ್ತೋ ಅದನ್ನು ಕ್ಯಾನ್ಸಲ್ ಮಾಡಿದ್ದಾರೆ. ಅದು ಹಳೆಯ ಗಣಿಗಾರಿಕೆಯಲ್ಲಿ ಇತ್ತು. ದೇವಸ್ಥಾನದ ಸುತ್ತಲೂ ಅವರ ಗಣಿಗಾರಿಕೆ ಕಾರ್ಯವಿತ್ತು. ಮತ್ತೆ ನಾವು 1996ರಲ್ಲಿ ಘೋಷಣೆ ಮಾಡಿ 200 ಮೀಟರ್ ಸುತ್ತಮುತ್ತಲಿನ ವ್ಯಾಪ್ತಿಯ ಪ್ರದೇಶವನ್ನು ಸೇಫ್ಟಿ ಜೋನ್ ಎಂದು ಡಿಕ್ಲೇರ್ ಮಾಡಿ ಅಲ್ಲಿ ಯಾವುದೇ ಕಾರಣಕ್ಕೂ ಗಣಿಗಾರಿಕೆ ಕೆಲಸ ಮಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ. ತಮಗೆ ಸತ್ಯ ಹೇಳಬೇಕೆಂದರೆ ಅಲ್ಲಿ ಅಕ್ರಮವಾಗಿಯೂ ಯಾವುದೂ ಕೂಡ ಗಣಿಗಾರಿಕೆ ಕೆಲಸ ನಡೆಯುತ್ತಿಲ್ಲವೆಂದು ಹೇಳಬಯಸುತ್ತೇನೆ. ಏಕೆಂದರೆ ಈ ಪ್ರಶ್ನೆ ನನಗೆ ಬರುವುದಕ್ಕಿಂತ ಮುಂಚೆಯೇ ನಮ್ಮ ಅಧಿಕಾರಿಗಳನ್ನು ಸ್ಥಳ ಪರಿಶೀಲನೆಗೆ ನಾನು ಕಳುಹಿಸಿದ್ದೆ. ಅವರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಅಲ್ಲಿ 200 ಮೀಟರ್ ವ್ಯಾಪ್ತಿಯೊಳಗೆ ಯಾವುದೇ ಅಕ್ರಮ ಗಣಿಗಾರಿಕೆ ಕೆಲಸ ನಡೆಯುತ್ತಿಲ್ಲವೆಂದು ಹೇಳಿದ್ದಾರೆ. ಮತ್ತೆ ದಿನಾಂಕ : 27.3.2003ರಂದು ಅಲ್ಲಿನ ಡೆಪ್ಯುಟಿ ಡೈರೆಕ್ಟರ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್, ತಹಸೀಲ್ದಾರ್ ಮತ್ತು ಅಲ್ಲಿರತಕ್ಕಂಥ ಲೋಕಲ್ ಅಫೀಸರ್‌ಗಳಾದ ವಿಲೇಜ್ ಅಕೌಂಟೆಂಟ್, ರೆವಿನ್ಯೂ ಇನ್ಸ್‌ಪೆಕ್ಟರ್ಸ್, ಹೀಗೆ ಇವರೆಲ್ಲರೂ ಸ್ಥಳ ತನಿಖೆಗೆ ಹೋಗಿದ್ದಾರೆ. ದೇವಸ್ಥಾನದಲ್ಲಿಯೇ ಸಭೆ ಸೇರಿ ಅವರು ಒಂದು ವರದಿಯನ್ನು ತಯಾರಿಸಿ ನನಗೆ ಕಳುಹಿಸಿಕೊಟ್ಟಿದ್ದಾರೆ. ಆ ವರದಿಯಲ್ಲಿ ಅವರು ತಿಳಿಸಿದ್ದಾರೆ. ಏನೆಂದರೆ ನಾವೇನು 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ಸೇಫ್ಟಿ ಜೋನ್ ಎಂದು ಡಿಕ್ಲೇರ್ ಮಾಡಿದ್ದೇವೋ ಆ ವ್ಯಾಪ್ತಿಯಲ್ಲಿ ಯಾವುದೇ ಗಣಿಗಾರಿಕೆ ನಡೆಯುತ್ತಿಲ್ಲ ಮತ್ತು ದೇವಸ್ಥಾನದ ಆವರಣದಲ್ಲಿರುವ ಅರ್ಚಕರ ಕಟ್ಟಡಕ್ಕಾಗಲೀ ಅಥವಾ ಇತರ ಕಟ್ಟಡಗಳಿಗಾಗಲೀ ಯಾವುದೇ ರೀತಿಯ ಹಾನಿಯಾಗಿಲ್ಲ ಎಂದು ವರದಿಯನ್ನು ಕೊಟ್ಟಿದ್ದಾರೆ. ಇನ್ನು 200 ಮೀಟರ್ ವ್ಯಾಪ್ತಿಯಾದ ಮೇಲೆಮುಂದೆ ಇರತಕ್ಕಂಥ ಜಾಗದಲ್ಲಿ ಪಂಪಾಪತಿ ಎನ್ನುವ ಒಬ್ಬರೇ ಒಬ್ಬರು ಮಾತ್ರ ಮೈಸೂರ್ ಮಿನರಲ್ಸ್ ಲಿಮಿಟೆಡ್‌ನವರ ಗಣಿಗಾರಿಕೆ ಕಾರ್ಯವನ್ನು ಮಾಡಿಸುತ್ತಿದ್ದಾರೆ. ಅದು ಸುಮಾರು 300,

400 ಮೀಟರ್ ಆಚೆಯಲ್ಲಿ ನಡೆಯುತ್ತಿರುವ ಗಣಿಗಾರಿಕೆ, ನಾವು 200 ಮೀಟರ್ ವ್ಯಾಪ್ತಿಗೆ ನಿರ್ಬಂಧ ಮಾಡಿದ್ದೇವೆ. ಆದರೆ ಅವರು ಗಣಿಗಾರಿಕೆ ಮಾಡುತ್ತಿರುವುದು 300, 400 ಮೀಟರ್ ಆಚೆಗೆ. ಆ ಪಂಪಾವತಿ ಎನ್ನುವವರು ಅಲ್ಲಿಯ ದೇವಸ್ಥಾನದಲ್ಲಿನ ಒಬ್ಬ ಭಕ್ತರು. ಜಂಬುನಾಥಸ್ವಾಮಿ ಅವರ ಮನೆದೇವರು. ಅವರೇ ವಾಲಿಂಟರಿಯಾಗಿ ಬಂದು ಅದರ ಸುತ್ತಲೂ ಕಾಂಪೌಂಡ್‌ನ್ನು ಹೆಚ್ಚಿಸಿದ್ದಾರೆ. ಆ ರೀತಿ ಕಾಂಪೌಂಡ್ ಹೆಚ್ಚಿಸಿ ಯಾವುದೇ ರೀತಿಯಲ್ಲಿ ಧೂಳು ದೇವಸ್ಥಾನದ ಒಳಗೆ ಬರದಂತೆ ಉಸ್ತುವಾರಿ ಕಾರ್ಯದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಇತ್ತೀಚೆಗೆ ನಮ್ಮ ಅಧಿಕಾರಿಗಳೆಲ್ಲರೂ ಅಲ್ಲಿಗೆ ಹೋಗಿ ಭೇಟಿ ಮಾಡಿ ತನಿಖೆ ಮಾಡಿ ದೇವಸ್ಥಾನದಲ್ಲಿಯೇ ಸಭೆ ಸೇರಿ ಒಂದು ರೆಸಲ್ಯೂಷನ್‌ನ್ನು ಮಾಡಿದ್ದಾರೆ. ಅದರ ವರದಿಯನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅದನ್ನು ಬೇಕಾದರೆ ತಮಗೆ ಕಳುಹಿಸಕೊಡುತ್ತೇನೆ. ಮಾನ್ಯ ಅಧ್ಯಕ್ಷರ ಮೂಲಕ ತಾವು ಪರಿಶೀಲನೆ ಮಾಡಿ. ಇನ್ನು 1995 ರಿಂದಲೂ ಕೆ.ಜಿ.ಎಫ್.ನಲ್ಲಿ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ರಾಕ್ ಮೆಕಾನಿಕ್ಸ್ ಎನ್ನುವ ಒಂದು ಸಂಸ್ಥೆ ಇದೆ. ಅಂದೇ ಅವರಿಗೆ ಈ ದೇವಸ್ಥಾನಕ್ಕೆ ಗಣಿಗಾರಿಕೆಯಿಂದ ಧಕ್ಕೆಯಾಗಬಹುದೇ ಎಂಬುದನ್ನು ಪರಿಶೀಲಿಸಲು ರೆಫರ್ ಮಾಡಿದ್ದಾರೆ. ಆ ಸಂಸ್ಥೆಯವರು ಅಲ್ಲಿಗೆ ಹೋಗಿ ಪ್ರತಿ 50,50 ಮೀಟರ್‌ನಲ್ಲಿಯೂ ಬ್ಲಾಸ್ಟ್ ಮಾಡಿದ್ದಾರೆ. 50 ಮೀಟರ್, 75 ಮೀಟರ್, 100 ಮೀಟರ್, 125 ಮೀಟರ್ ಹಾಗೂ 500 ಮೀಟರ್ ವ್ಯಾಪ್ತಿಯಲ್ಲಿ ಬ್ಲಾಸ್ಟ್ ಮಾಡಿ, 50 ಮೀಟರ್ ದೇವಸ್ಥಾನದಿಂದ ಆಚೆಯ ಪ್ರದೇಶದಲ್ಲಿ ಬ್ಲಾಸ್ಟ್ ಮಾಡಿದರೆ ದೇವಸ್ಥಾನಕ್ಕೆ ಯಾವುದೇ ರೀತಿಯಾದ ದುಷ್ಪರಿಣಾಮ ಆಗುವುದಿಲ್ಲವೆನ್ನುವ ಟೆಕ್ನಿಕಲ್ ರಿಪೋರ್ಟ್‌ವೊಂದನ್ನು ಕೊಟ್ಟಿದ್ದಾರೆ. 1995ನೇ ಇಸವಿಯಲ್ಲಿಯೇ ಈ ರಿಪೋರ್ಟ್‌ನ್ನು ಆ ಸಂಸ್ಥೆಯವರು ಕೊಟ್ಟಿದ್ದಾರೆ. ಆದರೂ ಕೂಡ ಅವರು 50 ಮೀಟರ್ ಮೇಲಕ್ಕೆ ಎಂದು ಹೇಳಿದ್ದರೂ ಕೂಡ ನಮ್ಮ ಇಲಾಖೆ 200 ಮೀಟರ್ ವ್ಯಾಪ್ತಿಯಲ್ಲಿಯೇ ಬ್ಲಾಸ್ಟಿಂಗ್ ಮಾಡುವುದನ್ನು ಬ್ಯಾನ್ ಮಾಡಿದ್ದೇವೆ. ಆ ರೀತಿ ಬ್ಯಾನ್ ಮಾಡಿ ಆ ಪ್ರದೇಶವನ್ನು ಸೇಫ್ಟಿ ಜೋನ್ ಎಂದು ಮಾಡಿದ್ದೇವೆ. ಆದ್ದರಿಂದ 200 ಮೀಟರ್ ವ್ಯಾಪ್ತಿಯಲ್ಲಿ ಅಕ್ರಮ ಗಣಿಗಾರಿಕೆ ಬರುವುದಿಲ್ಲ. ಇಷ್ಟೇ ಅಲ್ಲದೇ ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶವನ್ನು ಸಂರಕ್ಷಿತ ಪ್ರದೇಶವೆಂದು ನಾವು ಈಗಾಗಲೇ ಘೋಷಣೆಯನ್ನು ಮಾಡಿದ್ದೇವೆ. ಆ ದೇವಸ್ಥಾನಕ್ಕೆ ಬಂದಿರತಕ್ಕಂಥ, ಬರತಕ್ಕಂಥ ಭಕ್ತಾದಿಗಳಿಗೇ ಆಗಲಿ ಅಥವಾ ಬೇರೆಯವರಿಗೇ ಆಗಲಿ ತೊಂದರೆಯಾಗಿದೆ ಎನ್ನುವ ಯಾವುದೇ ರೀತಿಯ ದೂರುಗಳೂ ಇದುವರೆಗೆ ನಮ್ಮ ಇಲಾಖೆಗೆ ಬಂದಿಲ್ಲ. ಇದರ ಜೊತೆಗೆ ದೇವಸ್ಥಾನದ 140 ಮೀಟರ್ ಆಚೆಗೆ ಟ್ರಾನ್ಸ್‌ಪೋರ್ಟ್ ಮಾಡತಕ್ಕಂಥ ಒಂದು ರಸ್ತೆ ಇದೆ. ಅಲ್ಲಿ ಹೋಗುವ ಲಾರಿಗಳವರೇ ಒಂದು ವಾರಕ್ಕೆ ಮೂರು ಬಾರಿ ರಸ್ತೆಯ ಮೇಲೆ ನೀರನ್ನು ಹಾಕಲೇಬೇಕೆಂದು ನಿರ್ಬಂಧವನ್ನು ಮಾಡಿದ್ದಾರೆ. ಏಕೆಂದರೆ ಯಾವ ಯಾವ ಲಾರಿಗಳಿಂದ ಟ್ರಾನ್ಸ್‌ಪೋರ್ಟ್ ಆ ರಸ್ತೆಯಲ್ಲಿ ಮಾಡಲಾಗುತ್ತದೋ ಅದರಿಂದಾಗಿ ದೂಳು ಎದ್ದು ದೇವಸ್ಥಾನದ ಶಿಲ್ಪಕಲೆಗೆ ತೊಂದರೆಯಾಗಬಾರದು ಮತ್ತು ಭಕ್ತಾದಿಗಳಿಗೆ ತೊಂದರೆಯಾಗಬಾರದು ಎನ್ನುವ ಉದ್ದೇಶದಿಂದಲೇ ವಾರಕ್ಕೆ ಮೂರು ಬಾರಿ ನೀರನ್ನು ಹಾಕುವ ರೀತಿಯಲ್ಲಿ ಕೇರ್ ತೆಗೆದುಕೊಂಡಿದ್ದಾರೆ. ಹೀಗಾಗಿ ದೇವಸ್ಥಾನಕ್ಕೆ ಮತ್ತು ಭಕ್ತಾದಿಗಳಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದ ರೀತಿಯಲ್ಲಿ ಸದ್ಯಕ್ಕೆ ಅಲ್ಲಿ ಉಸ್ತುವಾರಿ ಮಾಡುತ್ತಿದ್ದಾರೆ. ಅದರ ಮುಂದೆ ಇತ್ತೀಚೆಗೆ ತಾವು ಹೇಳಿದ ಹಾಗೆ ಅಕ್ರಮ ಗಣಿಗಾರಿಕೆ ಏನಾದರೂ ನಡೆಯುತ್ತಿದ್ದರೆ ಅಲ್ಲಿಗೆ ನಮ್ಮ ಹಿರಿಯ ಅಧಿಕಾರಿಗಳನ್ನು ಕಳುಹಿಸಿ

ನೋಡಿಸುತ್ತೇನೆ. ನಾವೇನು 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ಸೇಫ್ಟಿ ಜೋನ್ ಎಂದು ಘೋಷಣೆ ಮಾಡಿದ್ದೇವೆ ಅಲ್ಲೇನಾದರೂ ಅಕ್ರಮ ಗಣಿಗಾರಿಕೆಗೆ ಯಾರಾದರೂ ಕೈ ಹಾಕಿದ್ದರೆ ಖಂಡಿತ ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಇವೊತ್ತು ಬೆಳಿಗ್ಗೆ ಕೂಡ ಹೊಸಪೇಟೆಯಿಂದ ನನಗೆ ಫೋನ್ ಬಂದಿತ್ತು. ಈ ಪ್ರಶ್ನೆ ಬಂದಾದ ಮೇಲೆ ನಾವು ವೆರಿಫೈ ಮಾಡುವುದಕ್ಕೆ ಇವೊತ್ತು ಬೆಳಿಗ್ಗೆ ಫೋನ್ ಮಾಡಿದಾಗಲೂ ಕೂಡ, ನೀವೇನು 1996 ರಲ್ಲಿ ಆದೇಶ ಮಾಡಿದ್ದರೂ ಕೂಡ ಅಕ್ರಮ ಗಣಿಗಾರಿಕೆ ಅಲ್ಲಿ ನಡೆಯುತ್ತಿದೆ. ಇತ್ತೀಚೆಗಿನ ಫೋಟೋಗಳನ್ನು ನಾನು ನಿಮ್ಮ ಕಡೆಗೆ ಕೊಟ್ಟಿದ್ದೇನೆ. ಅಲ್ಲಿ ಇವೊತ್ತಿಗೂ ಗಣಿಗಾರಿಕೆ ನಡೆಯುತ್ತಿದೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಇವೊತ್ತಿಗೂ ಕೂಡ ಅವರುಗಳು ಗಣಿಗಾರಿಕೆಯನ್ನು ರಾಜಾರೋಷವಾಗಿ ಮಾಡುತ್ತಿದ್ದಾರೆಂದರೆ, ಕೆಲವೊಂದು ರಾಜಕೀಯ ವ್ಯಕ್ತಿಗಳು ಅಲಿ ಅಕ್ರಮವಾದ ಗಣಿಗಾರಿಕೆಯನ್ನು ಮಾಡುತ್ತಿದ್ದಾರೆ. ರಾಜಕೀಯ ವ್ಯಕ್ತಿಗಳೂ ಇದ್ದಾರೆ. ಆದರೆ ಯಾವ ಪಕ್ಷ, ಏನು ಎಂದು ಹೇಳಿದರೆ ಸಿಟ್ಟು ಬರುತ್ತದೆ. ಅವರ ಹೆಸರು ಹೇಳಿದರೆ ಇಲ್ಲಿ ಸರಿಯಾಗುವುದಿಲ್ಲ. ನೀವು ವೆರಿಫೈ ಮಾಡಿರಿ. ಪ್ರಭಾವಿ ರಾಜಕೀಯ ವ್ಯಕ್ತಿಗಳು, ಒಂದು ರಾಜಕೀಯ ಪಕ್ಷದ ವ್ಯಕ್ತಿಗಳು ಅಲ್ಲಿ ಅಕ್ರಮವಾದ ಗಣಿಗಾರಿಕೆಯನ್ನು ಮಾಡುತ್ತಿದ್ದಾರೆ. ಮತ್ತೆ ಬೆಂಗಳೂರು ಮೂಲದ ಕೆಲವೊಂದು ರಾಜಕೀಯ ಪ್ರಭಾವಿ ವ್ಯಕ್ತಿಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ಅಲ್ಲಿ ಅಕ್ರಮವಾದಂಥ ಗಣಿಗಾರಿಕೆಯನ್ನು ಪ್ರಾರಂಭ ಮಾಡುವಂಥದ್ದು ಮತ್ತು ಅಲ್ಲಿ ಗಣಿಗಾರಿಕೆಗೆ ಪರ್ಮಿಷನ್ ತೆಗೆದುಕೊಳ್ಳುವಂಥದ್ದು, ಇವೆಲ್ಲಾ ನಡೆಯುತ್ತಿದೆ ಎಂದು ಹೇಳುವಂಥದ್ದು ಮಾಹಿತಿ ಇದೆ. ಹೀಗಾಗಿ ಇದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕಾಗಿದೆ. ಇವೊತ್ತು ವೀರಪ್ಪನ್ ಕಾರ್ಯಾಚರಣೆಯ ಹಿನ್ನೆಲೆಯಲ್ಲಿ ಯಳಂದೂರು ಪ್ರದೇಶದ ವ್ಯಾಪ್ತಿಯಲ್ಲಿ ಗಣಿಗಾರಿಕೆಯನ್ನು ನೀವು ನಿಷೇಧ ಮಾಡಿದ್ದಿರಿ. ವಿಧಾನ ಪರಿಷತ್ತಿನಲ್ಲಿ ಕೂಡ ಸಾಕಷ್ಟು ಚರ್ಚೆಯಾಯಿತು. ಅಂಥದ್ದರಲ್ಲೂ ಕೂಡ ನೀವು ಗಣಿಗಾರಿಕೆಗೆ ಪರ್ಮಿಶನ್ ಕೊಟ್ಟಿರಿ. ಅದು ಹೇಗೆ?

ಶ್ರೀ ವಿ. ಮುನಿಯಪ್ಪ : ಎಲ್ಲಿ ಕೊಟ್ಟೆವು?

ಶ್ರೀ ಜಗದೀಶ್ ಶೆಟ್ಟರ್ : ಮೊದಲು ಕೊಟ್ಟಿರಿ, ಆಮೇಲೆ ಅದನ್ನು ಹಿಂತೆಗೆದುಕೊಂಡಿರಿ. ಪರ್ಮಿಶನ್ ಕೊಡಬಾರದು ಎಂದು ಎಲ್ಲರ ಒತ್ತಾಯ ಇತ್ತು. ಆದರೂ ಗಣಿಗಾರಿಕೆಗೆ ಪರ್ಮಿಶನ್ ಕೊಟ್ಟಿರಿ. ಆಮೇಲೆ ಆ ಬಗ್ಗೆ ಸಾಕಷ್ಟು ಚರ್ಚೆಯಾದ ಮೇಲೆ ಅದನ್ನು ವಾಪಸ್ ತೆಗೆದುಕೊಳ್ಳುವಂಥದ್ದು ಆಯಿತು. ಇಂಥ ಕೆಲವೊಂದು ಸೂಕ್ಷ್ಮ ಪ್ರದೇಶಗಳಿರುತ್ತವೆ. ಹೀಗಾಗಿ ಜಂಬುನಾಥಸ್ವಾಮಿ ದೇವಸ್ಥಾನದ ಜಾಗವು ಧಾರ್ಮಿಕ ಭಾವನೆಗಳನ್ನೊಳಗೊಂಡಂತಹದ್ದು ಆಗಿದೆ. ಲಕ್ಷಾಂತರ ಭಕ್ತರ ಭಾವನೆಗಳಿಗೆ ಗೌರವ ಕೊಡುವಂಥ ಜಾಗ ಆದಾಗಿದೆ. ಇಂಥ ಒಂದು ಜಾಗದಲ್ಲಿ ಗಣಿಗಾರಿಕೆ ಮಾಡಬಾರದು ಎಂದು ಸರ್ಕಾರದ ಆದೇಶವಿದ್ದರೂ ಕೂಡ ಅಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದೆ ಎಂದರೆ ಒಂದು ರಾಜಕೀಯ ಹಿತಾಸಕ್ತಿ ಇದ್ದಂಥವರು, ಪ್ರಭಾವ ಇದ್ದಂಥವರು, ಅವರಿಂದ ಹೀಗೆ ಮಾಡುವುದಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ ಬೇರೆಯವರೂ ಮಾಡುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಅಧಿಕಾರಿಗಳೂ ಇಂಥದ್ದರಲ್ಲಿ ಶಾಮೀಲಾಗುತ್ತಾರೆ.

5.40 ಪಿಎಂ

ಅದಕ್ಕಾಗಿ ಇಲ್ಲಿಗೆ ನೀವು ಬೇಕಾದರೆ ವಿಸಿಟ್ ಮಾಡಿ. ನಾನು ಇವತ್ತು ಬೆಳಿಗ್ಗೆ ಫೋನ್ ಮಾಡಿದ್ದೇನೆ. ನಿಮ್ಮ ಅಧಿಕಾರಿಗಳನ್ನು ಕಳುಹಿಸಿದರೆ ಸ್ಥಳಕ್ಕೆ ಹೋಗಿದ್ದೆವು ಎನೂ ಇಲ್ಲವೆಂದು ಹೇಳುತ್ತಾರೆ. ಆದರೆ

ನೀವು ಸ್ಥಳ ವೀಕ್ಷಣೆ ಮಾಡಿ. ಆಗ ತಮಗೆ ಗೊತ್ತಾಗುತ್ತದೆ. ಕರಡಿಗುಡ್ಡ ಹಾಗೂ ಚಾಮರಾಜನಗರ ಈ ಹೆಸರುಗಳನ್ನು ಹೇಳುವುದಕ್ಕೆ ನೀವು ಏಕೋ ಹಿಂದೇಟು ಹಾಕುತ್ತಿದ್ದಿರಿ. ಆ ಹೆಸರು ನಿಮ್ಮ ಅಧಿಕಾರಿಗಳಿಗೆ ಯಾವುದು ಸೀಸ್ ಮಾಡಿದ್ದೇವೆಂದು ಗೊತ್ತಿರುತ್ತದೆ. ತಾವು ಹಿಂದೇಟು ಹಾಕಿದಿರಿ ಏಕೆ ಎಂಬುದು ಗೊತ್ತಾಗಲಿಲ್ಲ. ಯಾರೋ ಪ್ರಭಾವಿ ವ್ಯಕ್ತಿಗಳು ರಾಜಕೀಯ ವ್ಯಕ್ತಿಗಳು ಇರಬಹುದು, ಹೇಳುವುದಕ್ಕೆ ತಾವು ಹಿಂದೇಟು ಹಾಕಬಾರದು.

ಶ್ರೀ ವಿ. ಮುನಿಯಪ್ಪ : ನಾನು ಹಿಂದೇಟು ಹಾಕಲಿಲ್ಲ. ಕರಡಿಗುಡ್ಡದಲ್ಲಿ ಕೋರ್ಟ್ ಆಜ್ಞೆ ಬಂದ ತಕ್ಷಣ ನಾವು ಅಲ್ಲಿ ನಿಲ್ಲಿಸಿದ್ದೇವೆ. ಯಾವರೀತಿಯಲ್ಲಿ ಅಕ್ರಮವಾಗಿ ಮುಂದುವರೆಸುವುದಕ್ಕೆ ಅವಕಾಶ ಕೊಟ್ಟಿಲ್ಲವೆಂದು ನಿರ್ದಿಷ್ಟವಾಗಿ ಹೇಳಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಕೊಟ್ಟಿಲ್ಲ. ಅಲ್ಲಿ ಯಾರು ಮಾಡುತ್ತಿದ್ದರು ಎಂದು ಹೆಸರು ಹೇಳುವುದಕ್ಕೆ ತಯಾರಿಲ್ಲ. ತಾವು ಹಿಂದೇಟು ಹಾಕುತ್ತಿದ್ದೀರಿ. ನಿಮ್ಮ ಅಧಿಕಾರಿಗಳು ಇಲ್ಲಿ ಕುಳಿತಿದ್ದಾರೆ.

ಶ್ರೀ ವಿ. ಮುನಿಯಪ್ಪ : ಹೆಸರು ನನಗೆ ಗೊತ್ತಿಲ್ಲ. ನೀವು ಏಕಾಏಕ ಹೇಳಿದರೆ ಯಾರೆಂದು ಹೇಳಬೇಕು. ಆಯಿತು, ಯಾರೆಂದು ಹೆಸರು ಗೊತ್ತಿದ್ದರೆ ಕಳುಹಿಸಿ.

ಶ್ರೀ ಜಗದೀಶ್ ಶೆಟ್ಟರ್ : ನಿಮ್ಮ ಅಧಿಕಾರಿಗಳು ಇಲ್ಲಿ ಕುಳಿತಿದ್ದಾರೆ. ನೀವು ಸ್ವತಃ ವಿಸಿಟ್ ಮಾಡಿ. ಇವತ್ತು ಬೆಳಿಗ್ಗೆ ಫೋನ್ ಮಾಡಿದ್ದೇವೆ. ಇವತ್ತಿಗೂ ನಡೆಯುತ್ತಿದೆ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳೇ ಈಗ ನೀವು ಹಿರಿಯ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿದ್ದಿರಿ. ಅವರು ವರದಿ ಕೊಟ್ಟು ಆಗಿಲ್ಲವೆಂದು ಹೇಳುತ್ತಾರೆ. ಆದರೂ ಕೂಡ ವಿರೋಧ ಪಕ್ಷದ ನಾಯಕರು ಫೋಟೋ ಸಮೇತ ಹೇಳುತ್ತಿದ್ದಾರೆ. ಒಂದು ಸಲ ನೀವೇ ವಿಸಿಟ್ ಮಾಡಿ ಕನ್‌ಫರ್ಮ್ ಮಾಡಿಕೊಳ್ಳಿ. ನಿಮ್ಮ ಅಧಿಕಾರಿಗಳು ಸುಳ್ಳು ವರದಿ ಕೊಟ್ಟಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ವಿ. ಮುನಿಯಪ್ಪ : ಒಂದು ವಿಚಾರ ಏನೆಂದರೆ, ಇದರ ಬಗ್ಗೆ ಬಹಳ ಕಾಲದಿಂದ ದೂರು ಬರುತ್ತಿದೆ. ತನಿಖೆ ನಡೆಯುತ್ತಿದೆ. ಇದು ಹೊಸದಲ್ಲ. ಇದು 1995ರಲ್ಲಿ ಬಂದಿದ್ದು....

ಶ್ರೀ ಜಗದೀಶ್ ಶೆಟ್ಟರ್ : ನೀವು ಸರ್‌ಪ್ರೈಜ್ ವಿಸಿಟ್ ಮಾಡಿ. ನೀವು ಸ್ಟೇಟ್‌ಮೆಂಟ್ ಕೊಟ್ಟು ಹೋದರೆ ಅವರು ನಿಲ್ಲಿಸಿರುತ್ತಾರೆ.

ಶ್ರೀ ವಿ. ಮುನಿಯಪ್ಪ : ಖಂಡಿತವಾಗಿ ಮುಂದಿನ ತಿಂಗಳು ನೀವು ಹೇಳಿದ ಹಾಗೆ ಸರ್‌ಪ್ರೈಸ್ ವಿಸಿಟ್ ಮಾಡುತ್ತೇವೆ. ಅಲ್ಲಿಗೆ ಒಂದು ಸಾರಿ ಹೋಗಿಬರುತ್ತೇನೆ.

ಉಪಾಧ್ಯಕ್ಷರು : ಸಮಾಜ ಕಲ್ಯಾಣ ಇಲಾಖೆ ಮಂತ್ರಿಗಳು ಇಲ್ಲ. ಅವರ ಪರವಾಗಿ ಯಾರೂ ಹೇಳುವವರು ಇಲ್ಲ.

ಶ್ರೀ ಎಂ.ಡಿ ಲಕ್ಷ್ಮೀನಾರಾಯಣ : ಸರ್ಕಾರ ಇಲ್ಲವೆ?

ಉಪಾಧ್ಯಕ್ಷರು : ಸರ್ಕಾರ ಇದೆ.

ಶ್ರೀ ಆರ್.ವಿ. ದೇಶಪಾಂಡೆ : ಮುಂದೆ ಹೋಗಲಿ ಮಂತ್ರಿಗಳನ್ನು ಕರೆಸುತ್ತೇವೆ.

ಉಪಾಧ್ಯಕ್ಷರು : ಆಯಿತು, ಈಗ ಬರುತ್ತಾರಂತೆ, ಬಂದಮೇಲೆ ನಿಮ್ಮ ಪ್ರಶ್ನೆ ತೆಗೆದುಕೊಳ್ಳೋಣ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ : ಮಾನ್ಯ ಉಪಾಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆ ಮಂತ್ರಿಗಳು ಇಲ್ಲ ಎಂದರೆ ಈ ಸಮಾಜದ ಬಗ್ಗೆ ಗೌರವ ಕೂಡ ಇಲ್ಲ. ಅವರಿಗೆ ರಕ್ಷಣೆನೂ ಇಲ್ಲ.

ಉಪಾಧ್ಯಕ್ಷರು : ಕರೆಸೋಣ, ಎಲ್ಲರಿಗೂ ಪ್ರಶ್ನೆಗೆ ಉತ್ತರ ಕೊಡಿಸೋಣ.

ಶ್ರೀ ಸಿ.ಎಸ್. ನಾಡಗೌಡ : ಮಾನ್ಯ ಉಪಾಧ್ಯಕ್ಷರೆ, ಅವರ ಪರವಾಗಿ ಮಾನ್ಯ ಕಾಗೋಡು ತಿಮ್ಮಪ್ಪನವರು ಉತ್ತರ ಕೊಡುತ್ತಾರೆ.

ಉಪಾಧ್ಯಕ್ಷರು : ಅವರೂ ಇಲ್ಲ.

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಅವರು ಬರುತ್ತಾರೆ.

ಕುಮಟಾ ತಾಲ್ಲೂಕಿನಲ್ಲಿ ಮತ್ಸ್ಯಾಶ್ರಯ ಯೋಜನೆ

615 (5371) : ಶ್ರೀ ಮೋಹನ್ ಕೆ. ಶೆಟ್ಟಿ (ಕುಮಟ) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಮಟಾ ವಿಧಾನ ಸಭಾ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯ ಮೀನುಗಾರರಿದ್ದು, ಅವರಿಗೆ ಮತ್ಸ್ಯಾಶ್ರಯ ಯೋಜನೆಯಡಿ ಮಂಜೂರು ಮಾಡಿರುವ ಮನೆಗಳ ಸಂಖ್ಯೆ ಬಹಳ ಕಡಿಮೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪ್ರಸ್ತುತ ಮಂಜೂರು ಮಾಡಿರುವ ಮನೆಗಳು ಅತೀ ಕಡಿಮೆ ಸಂಖ್ಯೆಯಲ್ಲಿದ್ದು, ಉಳಿದ ಮೀನುಗಾರರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮನೆಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ವಸಂತ್ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು)

ಅ) ಇಲ್ಲಿಯವರೆವಿಗೂ ಕುಮಟಾ ತಾಲ್ಲೂಕಿಗೆ ಮತ್ಸ್ಯಾಶ್ರಯ ಯೋಜನೆಯಲ್ಲಿ 400 ಮನೆಗಳನ್ನು ಮಂಜೂರು ಮಾಡಲಾಗಿದೆ. ರಾಜ್ಯದ ಇತರ ಭಾಗಗಳಿಗೆ ಹೋಲಿಸಿದಲ್ಲಿ ಕುಮಟಾ ತಾಲ್ಲೂಕಿಗೆ ಯುಕ್ತವಾದಷ್ಟು ಮನೆಗಳನ್ನು ನೀಡಲಾಗಿದೆ.

ಆ) ಬೇಡಿಕೆ ಮತ್ತು ಅನುದಾನ ಲಭ್ಯತೆಗನುಗುಣವಾಗಿ ಮುಂದಿನ ವರ್ಷಗಳಲ್ಲಿ ಮನೆಗಳನ್ನು ಮಂಜೂರು ಮಾಡಲ್ಪಡಲಾಗುತ್ತದೆ.

ಶ್ರೀ ಮೋಹನ್ ಕೆ. ಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೆ ಅವರು ಮತ್ಸ್ಯಾಶ್ರಯ ಯೋಜನೆಯಲ್ಲಿ 400 ಮನೆಗಳನ್ನು ಮಂಜೂರು ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಅದು ಸತ್ಯಕ್ಕೆ ದೂರವಾದುದು. ನಮ್ಮ ಸರ್ಕಾರ ಬಂದಮೇಲೆ ಕೇವಲ 90 ಮತ್ಸ್ಯಾಶ್ರಯ ಯೋಜನೆಯಲ್ಲಿ ಮನೆಗಳು ಮಂಜೂರಾಗಿವೆ. ಆದರೆ ಅದಕ್ಕೆ ಇಲ್ಲಿವರೆಗೂ ಕೂಡ ಹಣ ಬಿಡುಗಡೆಯಾಗಿಲ್ಲ. ಇನ್ನು 2ನೆಯದಾಗಿ ನನ್ನ ಕ್ಷೇತ್ರದಲ್ಲಿ ಸುಮಾರು 40 ಸಾವಿರ ಬಡ ಮೀನುಗಾರರು ಇದ್ದಾರೆ. ಈಗಾಗಲೇ ಕುಮಟಾ ತಾಲ್ಲೂಕಿನಿಂದ 1003 ಅರ್ಜಿಗಳು ಬಂದಿವೆ. ನನ್ನ ಕಡೆಯಿಂದ 400 ಅರ್ಜಿಗಳು ಬಂದಿರುವುದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಆದುದರಿಂದ ಇದಕ್ಕೆ ಹಣ ಕೂಡಲೇ ಬಿಡುಗಡೆಯಾಗಬೇಕು. ಮತ್ತು ಅತೀ ಹೆಚ್ಚು 500 ಮನೆ ಬಿಡುಗಡೆ ಮಾಡಬೇಕೆಂದು ಹೇಳಿ ನಾನು ಇಲ್ಲಿ ಕೇಳುತ್ತಿದ್ದೇನೆ. ಹಾಗೆ ಮತ್ತೊಂದು ವಿಚಾರ ಮಾನ್ಯ ಸಚಿವರು ಹಿಂದಿನ ತಿಂಗಳು ಮಾನ್ಯ ಮುಖ್ಯಮಂತ್ರಿಗಳ ಜೊತೆ ಕರಾವಳಿಯ ಶಾಸಕರ ಸಭೆಯನ್ನು